ಮುಂದಕ್ಕೆ ಹಾಕಿ, ಅದರ ಬಗ್ಗೆ ವಿವರಗಳನ್ನು ತರಿಸಿ ಸೂಕ್ತವಾದ ತೀರ್ಮಾನ ತೆಗೆದು ಕೊಳ್ಳಲಿ, ಅಲ್ಲಿಯವರೆಗೆ ನಾವು ಹೊರಗಡೆ ಇರುತ್ತೇವೆ, ನೀವು ಅಧ್ಯಕ್ಷರನ್ನು ಇಕ್ಕಟ್ಟಿಗೆ ಹಾಕುತ್ತೀರಿ, ಜವಾಬ್ದಾರಿಯಿಂದ ಉತ್ತರವನ್ನು ಕೊಡುವುದಿಲ್ಲ.

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಈಗ ನಾವು ಜವಾಬ್ದಾರಿಯಿಂದ ಉತ್ತರವನ್ನು ಕೊಡುತ್ತೇವೆ, ಮಾನ್ಯ ಸದಸ್ಯರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ, ಅವರು ಬಂದು ಕುಳಿತುಕೊಳ್ಳಬೇಕು. 555 ಲಕ್ಷ ರೂಪಾಯಿಗಳು ಈಗಾಗಲೇ ಬಿಡುಗಡೆ ಆಗಿದೆ, ಇನ್ನು 35 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ. ಖರ್ಚು ಎಷ್ಟು ಆಗಿದೆ ಎಂದು ವಿವರವನ್ನು ಈ ದಿವಸ ತರಿಸಿಕೊಡುತ್ತೇವೆ.

ಅಧ್ಯಕ್ಷರು :- ಅವರದ್ದು ಸಾಕಷ್ಟು ಜನರು ಇರುವಂತಹ ರಾಜಕೀಯ ಪಕ್ಷ, ಸ್ವಲ್ಪ ಜನ ಹೊರಗಡೆ ಹೋಗಿದ್ದಾರೆ, ಸ್ವಲ್ಪ ಜನ ಇಲ್ಲಿ ನಿಂತಿದ್ದಾರೆ. ಸ್ವಲ್ಪ ಹೊತ್ತು ಸಭೆಯನ್ನು ಮುಂದಕ್ಕೆ ಹಾಕುತ್ತೇನೆ, ನೀವು ಮತ್ತು ಅವರು ಎಲ್ಲರೂ ಕುಳಿತುಕೊಂಡು ಮಾತನಾಡಿ ಒಂದು ತೀರ್ಮಾನಕ್ಕೆ ಬನ್ನಿ, ನೀವು ಬಂದು ಯಾವಾಗ ಬಗೆಹರಿಸಿಕೊಂಡಿದ್ದೇವೆ ಎಂದು ಹೇಳುತ್ತೀರಿ ಆಗ ಬೆಲ್ ಹಾಕಿಸುತ್ತೇನೆ.

(ಸಭೆಯು 12 ಗಂಟೆ 57 ನಿಮಿಷಕ್ಕೆ ಮುಂದೂಡಲ್ಪಟ್ಟು 2 ಗಂಟೆಗೆ ಮತ್ತೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸಭೆಯು ಮಧ್ಯಾಹ್ನ 2.50 ನಿಮಿಷಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷ ಪೀಠದಲ್ಲಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಾಮನಿಯವರು ಉಪಸ್ಥಿತರಿದ್ದರು)

ಉಪಾಧ್ಯಕ್ಷರು :- ಈಗ ವಿರೋಧ ಪಕ್ಷದ ನಾಯಕರು ಮತ್ತು ಮಂತ್ರಿಗಳು ಮಾತನಾಡಿದ ಪ್ರಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಸದನದಲ್ಲಿ ಮಂತ್ರಿಗಳು ಇಲ್ಲ ಯಾರೂ ಇಲ್ಲ. ಇದನ್ನು ನಾವು ಯಾರಿಗೆ ಹೇಳಬೇಕು? ಎಷ್ಟೊಂದು ಬೇಜವಾಬ್ದಾರಿಯಾದರೆ ಅವರನ್ನು ಹುಡುಕಿಕೊಂಡು ಹೋಗುವುದಕ್ಕಾಗುತ್ತದೆಯೇ? ಇದು ಏನು ಪರಿಸ್ಥಿತಿ?

ಉಪಾಧ್ಯಕ್ಷರು :- ನೀವು, ನಾವು ಎಲ್ಲರೂ ಕೂಡಿ ಅಧ್ಯಕ್ಷ ಕೊಠಡಿಯಲ್ಲಿ ಕುಳಿತು ತೀರ್ಮಾನವನ್ನು ಮಾಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ತಾವು ಸದನಕ್ಕೆ ಬಂದ ಮೇಲಾದರೂ ಸಹಿತ ಅವರುಗಳೆಲ್ಲರೂ ಸದನಕ್ಕೆ ಬರಬೇಕಲ್ಲಾ. ಮಾನ್ಯ ಉಪ ಮುಖ್ಯ ಮಂತ್ರಿಗಳು ಬರಲಿಲ್ಲವಲ್ಲಾ. ಬಹಳ ಜನ ಡಿ. ಸಿ. ಎಂ. ಮೇಲೆ ಹೋಗುತ್ತೇನೆಂದು ಹೇಳುತ್ತಾರೆ. ಡಿ. ಸಿ. ಎಂ. ಎಂದರೆ ಷೋರೂಂ ಎಂದು ತಿಳಿದುಕೊಂಡಿದ್ದಾರೆ. ಅವರು ಬರಲಿ, ಬರಲಿ, ಎಂದರೆ ಅವರು ಎಲ್ಲಿದ್ದಾರೆಂದು ಹುಡುಕಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ :- ಇದು ಪ್ರತಿನಿತ್ಯ ಇದೇ ರೀತಿಯಾಗಿ ಬಿಟ್ಟಿದೆ.